ಅರಣ್ಯ ಇಲಾಖೆಯಲ್ಲಿ ಅಕ್ರಮ ಸಾಗುವಳಿ ಬಗ್ಗೆ

18(348)

ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿಯ ಒಟ್ಟು ಅರಣ್ಯ ಪ್ರದೇಶ ಎಷ್ಟು ಹೆಕ್ಟೇರುಗಳಿವೆ?

ಆ) ಅರಣ್ಯ ಇಲಾಖೆಯ ವಶದಲ್ಲಿರುವ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡಿಕೊಂಡಿರುವ ಪ್ರದೇಶ ಎಷ್ಟು?

ಇ) ಅಕ್ರಮ ಸಾಗುವಳಿ ಮಾಡಿರುವ ಪ್ರದೇಶದಲ್ಲಿ ಆಯಾಯ ರೈತರಿಗೆ ಜಮೀನು ಕೊಡಲು ಏನಾದರೂ ಕ್ರಮ ಕೈಗೊಂಡಿದ್ದೀರ? ಹಾಗಿದ್ದಲ್ಲಿ ಇದುವರೆಗೆ ಹಂಚಿರುವ ಪ್ರದೇಶ ಎಷ್ಟು?

ಈ) ಅವರಿಗೆ ಅರಣ್ಯ ಇಲಾಖೆ: ಕಂದಾಯ ಇಲಾಖೆ ಮೂಲಕ ಪಟ್ಟಾವಗೈರೆ ನೀಡಲಾಗಿದೆಯೇ?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು):

ಅ) 38,28,428 ಹೆಕ್ಟೇರ್‌ಗಳು.

ಆ) 1,09,047 ಹೆಕ್ಟೇರ್

ಇ) ದಿನಾಂಕ 27-4-78ರ ಪೂರ್ವದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಜಮೀನು ರಹಿತ ಬಡ ಕುಟುಂಬದ ಅರಣ್ಯ ಭೂಮಿ ಅತಿಕ್ರಮಣಗಳಿಗೆ ಮಾತ್ರ ಕೇಂದ್ರ ಸರ್ಕಾರ ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ರೀತ್ಯ ಹಲವು ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರವು ಕೂಡ ಈ ನಿಟ್ಟನಲ್ಲಿ ದಿನಾಂಕ 5-5-97ರಂದು ಆದೇಶ ಹೊರಡಿಸಿರುತ್ತದೆ. ಒಟ್ಟು 19348 ಕುಟುಂಬಗಳು ಮಾಡಿದ 14848 ಹೆಕ್ಟೇರು ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲು ಆದೇಶಿಸಲಾಗಿದೆ.

ಈ) ಸರ್ಕಾರಿ ಆದೇಶದಲ್ಲಿ ತೋರಿದ ಷರತ್ತುಗಳನ್ನು ಪೂರೈಸುವ ಎಲ್ಲಾ ಅರ್ಹ ಪ್ರಕರಣಗಳಲ್ಲಿ ಅರ್ಹ ಜನರಿಗೆ ಕಂದಾಯ ಇಲಾಖೆಯಿಂದ ಪಟ್ಟಾ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.